**ದಿನಾಂಕಃ 08-02-2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

3. ನಂತರ ಆರಕ್ಷಕ ಉಪಾಧೀಕ್ಷಕರು ದೋಸಾ-6 ಆರಕ್ಷಕ ಮುಖ್ಯ ಪೇದೆರವರಿಗೆ ಪಿರ್ಯಾದಿ ಹಾಜರುಪಡಿಸಿದ ನೋಟುಗಳಿಗೆ ಎರಡು ಬದಿಗೆ ಪಿನಾಪ್ತಲಿನ್ ಪುಡಿ ಸವರಲು ಸೂಚಿಸಿದರು. ಆಗ ಆ ಪುಡಿಯಿಂದ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಲಕೋಟೆಯಲ್ಲಿ ಹಾಕಿ ಅದನ್ನು ಮುಚ್ಚಿ ಅರಗು ಹಚ್ಚಿ, ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 1 ಎಂದು ಗುರುತಿಸಿದರು. ದೋಸಾ-6 ರವರು ಆ ನೋಟುಗಳಿಗೇ ಪಿನಾಪ್ತಲಿನ್ ಪುಡಿಯನ್ನು ಎರಡೂ ಬದಿಗೆ ಸವರಿದರು. ನಂತರ ಪಂಚ 1 ದರ್ಶನಾ ನಾಯ್ಕ ಆ ನೋಟುಗಳನ್ನು ಆರಕ್ಷಕ ಉಪಾಧೀಕ್ಷಕರ ಸೂಚನೆಯ ಮೇರೆಗೆ ಎಣಿಸಿದರು. ಅದರಲ್ಲಿ ರೂ. 1000 ದ ಎರಡು ನೋಟು ಹಾಗೂ ರೂ. 500/ ರ ಎರಡು ನೋಟು ಇತ್ತು , ಒಟ್ಟು ರೂ. 3000/- ಇತ್ತು. ನಂತರ ನನಗೆ ಸೋಡಿಯಮ್ ಕಾರ್ಬೋನೇಟ್ ದ್ರಾವಣ ಪಿಂಗಾಣಿ ಬಟ್ಟಲಿನಲ್ಲಿ ತಯಾರಿಸಲು ಹೇಳಿದರು. ನಾನು ಒಂದು ಪಿಂಗಾಣಿ ಬಟ್ಟಲಿನಲ್ಲಿ ಬಟ್ಟಿ ಇಳಿಸಿದ ನೀರನ್ನು ಹಾಕಿ ಅದಕ್ಕೆ ಒಂದು ಚಮಚ ಸೋಡಿಯಮ್ ಕಾರ್ಬೋನೇಟ್ ಪುಡಿ ಹಾಕಿ ದ್ರಾವಣ ತಯಾರಿಸಿದೆ. ಆ ದ್ರಾವಣದಿಂದ ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ಒಂದು ಕ್ವಾಟರ್ ಬಾಟಲಿನಲ್ಲಿ ಹಾಕಿ , ಮುಚ್ಚಳ ಹಾಕಿ ಬಂದ ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 3 ಎಂದು ಗುರುತಿಸಿದರು. ನಂತರ ಆಗ ದ್ರಾವಣ ತಯಾರಿಸಲು ಉಪಯೋಗಿಸಿದ ಬಿಟ್ಟ ಇಳಿಸಿದ ನೀರಿನಲ್ಲಿ ಸ್ವಲ್ಪ ನೀರನ್ನು ಮಾದರಿಗಾಗಿ ಒಂದು ಕ್ವಾಟರ್ ಬಾಟಲಿನಲ್ಲಿ ಹಾಕಿ , ಮುಚ್ಚಳ ಹಾಕಿ ಬಂದ ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 2 ಎಂದು ಗುರುತಿಸಿದರು. ಆಗ ದ್ರಾವಣ ತಯಾರಿಸಲು ಉಪಯೋಗಿಸಿದ ಸೋಡಿಯಮ್ ಕಾರ್ಬೋನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು

ಮಾದರಿಗಾಗಿ ಒಂದು ಲಕೋಟೆಯಲ್ಲಿ ಹಾಕಿ , ಮುಚ್ಚಿ ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ ನೀಡಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ತಯಾರಿಸಿದ ಸೋಡಿಯಮ ಕಾರ್ಬೋನೇಟ್ ಧ್ರಾವಣದಲ್ಲಿ ನೋಟು ಎಣಿಸಿದ ಪಂಚ 1 ರವರ ಕೈ ಬೆರಳುಗಳನ್ನು ಅದ್ದಿಸಿ ತೊಳೆಸಲಾಗಿ, ಆಗ ಬಣ್ಣ ರಹಿತ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿುತು. ಅದನ್ನು ಒಂದು ಬಾಟಲಿಯಲ್ಲಿ ಹಾಕಿ ಮುಚ್ಚಳ ಹಾಕಿ ಬಂದ ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ ನೀಡಿದರು. ಆಗ ಆರಕ್ಷಕ ಉಪಾಧೀಕ್ಷಕರು ಪಂಚರು ಮತ್ತು ಪಿರ್ಯಾದಿಗೆ ಸೋಡಿಯಮ್ ಕಾರ್ಬೋನೆಟ್ ಧ್ರಾವಣದಲ್ಲಿ ಪಿನಾಪ್ತಲಿನ್ ಧ್ರಾವಣವನ್ನು ಮುಟ್ಟಿ ಕೈಯನ್ನು ಅದ್ದಿದರೆ ಆ ಬಣ್ಣ ರಹಿತ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ವಿವರಿಸಿ ಹೇಳಿದರು. ಪಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಪಂಚ 1 ರವರಿಗೆ ಪಿರ್ಯಾದಿಯ ಅಂಗಿಯ ಎಡ ಕಿಸೆಯಲ್ಲಿ ಇಡುವಂತೆ ತಿಳಿಸಿದರು. ಅದರಂತೆ ಆಗ ಪಂಚ–1 ದರ್ಶನ್ ನಾಯ್ಕ ರವರು ಪಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಪಿರ್ಯಾದಿಯ ಅಂಗಿಯ ಎಡಕಿಸೆಯಲ್ಲಿ ಇಟ್ಟರು. ಆ ನೋಟುಗಳನ್ನು ಪದೇ ಪದೇ ಮುಟ್ಟಬಾರದು ಎಂದು ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ತಿಳಿಸಿದರು. ಆರೋಪಿ ಬಳಿ ಹೋದಾಗ ಆರೋಪಿಯು ಕೇಳಿದರೆ ಆ ಪಿನಾಪ್ತಲಿನ್ ಪುಡಿ ಲೇಪನ ಮಾಡಿದ ಹಣವನ್ನು ಆರೋಪಿಗೆ ಕೊಡಬೇಕು ಅಥವಾ ಆರೋಪಿ ಎಲ್ಲಿ ಇಡಲು ಹೇಳುತ್ತಾನೋ ಅಲ್ಲಿ ಇಡಬೇಕು ಎಂದು ಪಿರ್ಯಾದಿಗೆ ಸೂಚಿಸಿದರು. ನಂತರ ಜೇಬಿನಲ್ಲಿ ಇರುವ ಕರವಸ್ತ್ರವನ್ನು ತೆಗೆದು ಸನ್ನೆ ನೀಡಬೇಕೆಂದು ಪಿರ್ಯಾದಿಗೆ ಸೂಚಿಸಿದರು. ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ಒಂದು ಡಿಜಿಟಲ್ ವಾಯ್ಸು ರೆಕಾರ್ಡರನ್ನು ನೀಡಿದರು ಮತ್ತು ಆರೋಪಿ ಬಳಿ ಹೋದಾಗ ಅದನ್ನು ಚಾಲು ಮಾಡಿ ಇಟ್ಟುಕೊಂಡು ಆರೋಪಿಯ ಜೊತೆ ಆಗುವ ಮಾತುಕತೆಯನ್ನು ಧ್ವನಿ ಮುದ್ರಣ ಮಾಡಿಕೊಳ್ಳಬೇಕು ಎಂದು ಸೂಚಿಸಿದರು. ಆ ವಾಯ್ಸು ರೆಕಾರ್ಡರನ್ನು ಹೇಗೆ ಉಪಯೋಗಿಸಬೇಕೆಂದು ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ಮಾಹಿತಿ ನೀಡಿದರು. ನಂತರ ಪಿರ್ಯಾದಿ ಜೊತೆ ಹೋಗುವಂತೆ ಪಂಚ–1

ರವರಿಗೆ ತಿಳಿಸಿದರು. ಆರೋಪಿ ಬಳಿ ಪಿರ್ಯಾದುದಾರ ಹೋದಾಗ ಪಂಚ–1 ರವರು ಸಂಗಡ ಇದ್ದು ವೀಕ್ಷಿಸಬೇಕು ಎಂದು ಪಂಚ–1 ರವರಿಗೆ ತಿಳಿಸಿದರು. ನಂತರ ಅಲ್ಲಿ ನಡೆಯುವ ಘಟನೆಯನ್ನು ತಮಗೆ ಪಂಚ–1 ರವರು ತಿಳಿಸಬೇಕು ಎಂದು ಸೂಚಿಸಿದರು. ಜಪ್ತು ಮಾಡಿದ ಮೇಲೆ ಹೇಳಿದ ವಸ್ತುಗಳನ್ನು ಆರಕ್ಷಕ ಉಪಾಧೀಕ್ಷಕರು ಅವರ ವಶಕ್ಕೆ ತೆಗೆದುಕೊಂಡು ಠಾಣೆಯಲ್ಲಿ ಅವರ ಕಪಾಟಿನಲ್ಲಿ ಇಟ್ಟುಕೊಂಡರು. ಆರಕ್ಷಕ ಉಪಾಧೀಕ್ಷಕರು ನಮಗೆಲ್ಲರಿಗೂ ಸಾಬೂನಿನಿಂದ ಕೈಗಳನ್ನು ತೊಳೆದುಕೊಳ್ಳಲು ಹೇಳಿದರು. ನಾವೆಲ್ಲರೂ ಅದೇ ಪ್ರಕಾರ ಸಾಬೂನಿನಿಂದ ನಮ್ಮ ಕೈಗಳನ್ನು ತೊಳೆದುಕೊಂಡೆವು. ಮೇಲ್ಕಂಡ ಎಲ್ಲಾ ಪ್ರಕ್ರಿಯೇ ಬಗ್ಗೆ ದೂಸಾ–10 ರವರು ಆರಕ್ಷಕ ಉಪಾಧೀಕ್ಷಕರ ನಿರ್ದೇಶನದ ಪ್ರಕಾರ ಛಾಯಚಿತ್ರಗಳನ್ನು ತೆಗೆದರು. ಆಗ ಆರಕ್ಷಕ ಉಪಾಧೀಕ್ಷಕರು ಹೇಳಿದಂತೆ ದೂಸಾ–9 ರವರು ಪ್ರಾಯೋಗಿಕ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿದರು. ಕಾರವಾರದ ಲೋಕಾಯುಕ್ತ ಠಾಣೇಯಲ್ಲಿ ಮಧ್ಯಾಹ್ನ 3.00 ರಿಂದ 4.30 ರವರೆಗೆ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿದರು. ಆಗ ಜಪ್ತು ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನ್ಯಾಯಾಲಯದ ಮುಂದೆ ಆಗ ಜಪ್ತು ಮಾಡಿದ ಮಾದರಿ ಪಿನಾಪ್ತಲಿನ್ ಪುಡಿ ಇರುವ ಲಕೋಟೆ, ಮಾದರಿ ಬಟ್ಟೆ ಇಳಿಸಿದ ನೀರು ಸಂಗ್ರಹಿಸಿರುವ ಬಾಟಲಿ , ಮಾದರಿ ಸೋಡಿಯಮ್ ಕಾರ್ಬೋನೆಟ್ ಪುಡಿ ಇರುವ ಲಕೋಟೆ , ಮಾದರಿ ಸೋಡಿಯಮ್ ಕಾರ್ಬೋನೆಟ್ ದ್ರಾವಣ ಇರುವ ಬಾಟಲಿ ಹಾಗೂ ಆಗ ಜಪ್ತು ಮಾಡಿದ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾದ ದ್ರಾವಣ ಸಂಗ್ರಹಿಸಿದ ಬಾಟಲಿ (ಈಗ ಆ ಬಾಟಲಿ ಒಡೆದಿದೆ.) ಅನ್ನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ. ಅವುಗಳನ್ನೇ ಆಗ ಜಪ್ತು ಮಾಡಿರುತ್ತಾರೆ. ಸಾಕ್ಷಿಯು ಅವುಗಳನ್ನು ಗುರುತಿಸಿದ್ದು ಈಗಾಗಲೇ ಅವುಗಳಿಗೆ ಮು.ಮಾ 2 ರಿಂದ 6 ಎಂದು ನಿಶಾನಿಸಲಾಗಿದೆ. ಆ ದಿನ ಮಾಡಿದ ಪಂಚನಾಮೆಯನ್ನು ನೋಡಿದರೆ ಗುರುತಿಸಿರುತ್ತೆನೆ. ಈಗ ಆ ಪಂಚನಾಮೆಯನ್ನು ನೋಡಿರುತೆನೆ . ಈಗಾಗಲೇ ಆ ಪಂಚನಾಮೆಯನ್ನು ನಿಪಿ–1 ಎಂದು ಗುರುತಿಸಲಾಗಿದೆ. ಪ್ರಾಯೋಗಿಕ ಪಂಚನಾಮೆಯಲ್ಲಿ ತೆಗೆದ ಛಾಯಾಚಿತ್ರಗಳನ್ನು ಗುರುತಿಸುತ್ತೇನೆ. ಈಗ ನಾನು ಆ ಛಾಯಾಚಿತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ಪ್ರಾಯೋಗಿಕ ಪಂಚನಾಮೆಯಲ್ಲಿ ತೆಗೆದಿದ್ದಾರೆ . ಸಾಕ್ಷಿಯು ನಿಪಿ–6 ರಿಂದ 18 ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

4. ನಂತರ ಅದೇ ದಿನ ಸಂಜೆ 4.35 ಗಂಟೆಗೆ ಕಾರವಾರದ ಲೋಕಾಯುಕ್ತ ಠಾಣೆಯಿಂದ ಎರಡು ಇಲಾಖಾ ವಾಹದಲ್ಲಿ ಆರಕ್ಷಕ ಉಪಾಧೀಕ್ಷಕರು , ಆರಕ್ಷಕ ನಿರೀಕ್ಷಕರು , ನಾನು , ಇತರೆ ಸಿಬ್ಬಂದಿ , ಪಿರ್ಯಾದುದಾರ ಮತ್ತು ಪಂಚರು ಟ್ರಾಪ್ ಕಾರ್ಯಾಚರಣೆಗೆ ಬೇಕಾದ ಸಲಕರಣೆಗಳನ್ನು ತೆಗೆದುಕೊಂಡು ಕುಮಟಾಕ್ಕೆ ಹೋದೆವು . ಸಂಜೆ 6.00 ಗಂಟೆಗೆ ನಾವು ತಲುಪಿದೆವು ಅಲ್ಲಿ ಗಿಬ್ಸ್ ಪೌಢಶಾಲೆ ವೃತ್ತದ ಬಳಿ ವಾಹನಗಳನ್ನು ಆರಕ್ಷಕ ಉಪಾಧೀಕ್ಷಕರು ನಿಲ್ಲಿಸಿದರು. ಅಲ್ಲಿ ಪಿರ್ಯಾದಿಗೆ ಆಪಾದಿತನಿಗೆ ದೂರವಾಣಿ ಕರೆ ಮಾಡುವಂತೆ ತಿಳಿಸಿದರು. ಆಗ ಪಿರ್ಯಾದಿ ಮೊಬೈಲ್ ನಲ್ಲಿ ಆಪಾದಿತನಿಗೆ ಕರೆ ಮಾಡಲಾಗಿ ಆರೋಪಿ ತಾನು ತಲೂಕಾ ಪಂಚಾಯತಿ ಕಚೇರಿಯಲ್ಲಿ ಇದ್ದೇನೆ ಅಲ್ಲಿಗೆ ಬರುವುದು ಎಂದು ಆಪಾದಿತ ಹೇಳಿದ. ನಂತರ ಆರಕ್ಷಕ ಉಪಾಧೀಕ್ಷಕರು ನಮ್ಮನೆಲ್ಲಾ ಜೀಪನಿಂದ ಕೆಳಗೆ ಇಳಿಸಿ, ಪಂಚ–1 ಮತ್ತು ಪಿರ್ಯಾದುದಾರನಿಗೆ ತಾಲೂಕು ಪಂಚಾಯತಿ ಕಚೇರಿಗೆ ಹೋಗಲು ಕಳುಹಿಸಿದರು. ನನಗೆ ಆರಕ್ಷಕ ನಿರೀಕ್ಷಕರು ಹಾಗೂ ಸುದರ್ಶನ್ ನಾಯ್ಕ ಎಂಬ ಆರಕ್ಷಕ ಮುಖ್ಯ ಪೇದೆ ರವರಿಗೆ ಅಲ್ಲಿ ಇದ್ದ ಎ ಒನ್ ಜೆರಾಕ್ಸ ಸೆಂಟರ್ ಬಳಿ ಇದ್ದು ವೀಕ್ಷಿಸುವಂತೆ ಆರಕ್ಷಕ ಉಪಾಧೀಕ್ಷಕರು ಸೂಚಿಸಿದರು. ಆರಕ್ಷಕ ಉಪಾಧೀಕ್ಷಕರು ಮತ್ತು ಪಂಚ–2 ರವರು ತಾಲುಾಕು ಪಂಚಾಯತಿ ಕಚೇರಿಯ ಉತ್ತರಕ್ಕೆ ಹೋಗುವ ರಸ್ತೆಯಲ್ಲಿ ನಿಂತುಕೊಂಡರು. ಪಿರ್ಯಾದುದಾರ ಆಪಾದಿತನ ಬಳಿ ಹೋಗಿ ವಾಪಸ್ಸು ಬರುವಾಗ ಕರವಸ್ತ್ರದಿಂದ ಮುಖ ವರಿಸಿ ಸನ್ನೆ ಮಾಡಿದ ಮೇಲೆ ಅಲ್ಲಿಗೆ ನಾವೆಲ್ಲಾ ಹೋಗುವುದು ಎಂದು ಆರಕ್ಷಕ ಉಪಾಧೀಕ್ಷಕರು ಸೂಚನೆ ನೀಡಿದರು. ಪಿರ್ಯಾದುದಾರರನ್ನು ಕಳುಹಿಸುವುದಕ್ಕೆ ಮೊದಲು ಅವನಿಗೆ ಕೊಟ್ಟಿದ್ದ ಡಿಜಿಟಲ್ ವಾಯ್ಸು ರೆಕಾರ್ಡರನ್ನು ಚಾಲು ಮಾಡಿ ಇಟ್ಟುಕೊಳ್ಳಲು ಸೂಚಿಸಿದರು. ಆಗ ಸಂಜೆ 6.15 ಗಂಟೆ ಆಗಿತ್ತು. ಪಿರ್ಯಾದಿ ಮತ್ತು ಪಂಚ–1 ರವರು ಆರೋಪಿ ಕಚೇರಿಗೆ ಹೋದ ಮೇಲೆ ನಾವು ಹೊರಗಡೆ ಕಾಯುತ್ತಿದ್ದಾಗ ಪಿರ್ಯಾದಿಯವರು ಸಂಜೆ 6.35 ಗಂಟೆಗೆ ತಾಲೂಕು ಕಚೇರಿಯ ಹೊರಗಡೆ ಬಂದು ಕರವಸ್ತ್ರದಿಂದ ಮುಖ ವರಸಿಕೊಂಡು ಕರವಸ್ತ್ರವನ್ನು ಜಾಡಿಸಿ ಸನ್ನೆ ನೀಡಿದರು. ಆಗ ನಾವೆಲ್ಲಾ , ಆರಕ್ಷಕ ಉಪಾಧೀಕ್ಷಕರು, ಪಂಚ–2 ರವರು ಎಲ್ಲಾ ಸೇರಿ ಕಚೇರಿ ಒಳಗೆ ಹೋದೆವು. ಆಗ ಆರೋಪಿ ಅಲ್ಲಿಂದ ಓಡಿ ಹೋದ ವಿಚಾರ ಗೊತ್ತಾಯಿತು ಆರೋಪಿ ಅವನ ಹೀರೋ ಹೊಂಡ ಬೈಕ್ ನಲ್ಲಿ ಓಡಿ ಹೋದ ಎಂದು ಗೊತ್ತಾಯಿತು. ನಂತರ ನಾವು

ಕುಮಟಾದಲ್ಲಿ ಎಲ್ಲಾ ತಿರುಗಾಡಿದ ಮೇಲೆ ಎರವಟ್ಟಾ ರಸ್ತೆಯಲ್ಲಿ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಮೇಲೆ ಆರೋಪಿಯನ್ನು ತಡೆದೆವು. ಆಗ ಆರೋಪಿ ತನ್ನ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಅಲ್ಲಿಯೇ ಗಿಡಗಂಟೆಯಲ್ಲಿ ಬಿಸಾಡಿದ. ಆಗ ನಾನು ಆರೋಪಿಯನ್ನು ನೋಡಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಕಟಕಟೆಯಲ್ಲಿ ಆ ಆರೋಪಿ ಇದ್ದಾನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಆರೋಪಿಯನ್ನು ಗುರುತಿಸಿರುತ್ತಾರೆ. ಆಗ ಆರಕ್ಷಕ ಉಪಾಧೀಕ್ಷಕರ ಸೂಚನೆಯ ಮೇರೆಗೆ ಆರೋಪಿಯ ಕೈಗಳನ್ನು ದೋಸಾ–7 ಮತ್ತು 9 ರವರು ಹಿಡಿದುಕೊಂಡರು. ಇದೇ ಆರೋಪಿ ತನ್ನಿಂದ ಲಂಚದ ಹಣವನ್ನು ಪಡೆದದ್ದು ಮತ್ತು ಹೀರೋ ಹೊಂಡ ಬೈಕ್ ನಲ್ಲಿ ಓಡಿ ಹೋದದ್ದು ಎಂದು ಆಗ ಪಿರ್ಯಾದುದಾರ ಆರೋಪಿಯನ್ನು ತೋರಿಸಿ ಆರಕ್ಷಕ ಉಪಾಧೀಕ್ಷಕರಿಗೆ ತಿಳಿಸಿದ. ಆಗ ಆರಕ್ಷಕ ಉಪಾಧೀಕ್ಷಕರು ಆರೋಪಿಗೆ ಅವರ ಪರಿಚಯ ಹೇಳಿ ತಾನು ಲೋಕಾಯುಕ್ತದ ಆರಕ್ಷಕ ಉಪಾಧೀಕ್ಷಕರು ಎಂದು ತಿಳಿಸಿದರು. ಪಂಚ–1 ರವರಿಗೆ ಆರೋಪಿ ಅಲ್ಲಿ ಬಿಸಾಡಿದ ನೋಟುಗಳನ್ನು ತೆಗೆದುಕೊಳ್ಳುವಂತೆ ಆರಕ್ಷಕ ಉಪಾಧೀಕ್ಷಕರು ಸೂಚಿಸಿದರು ಆಗ ಪಂಚ–1 ರವರು ಅಲ್ಲಿ ಬಿದ್ದಿದ್ದ ನೋಟುಗಳನ್ನು ತೆಗೆದು ಎಣಿಸಿದರು ಅದು ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಹಾಜರುಪಡಿಸಿದ ನೋಟುಗಳೇ ಎಂದು ತಿಳಿಸಿದರು. ಆಗ ಆರೋಪಿಯನ್ನು ಆರಕ್ಷಕ ಉಪಾಧೀಕ್ಷಕರು ಕುಮಟಾದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದರು ಕಾರಣ ಆಗ ಸಮಯ ರಾತ್ರಿ 8.40 ಆಗಿತ್ತು ಮತ್ತು ಕತ್ತಲೆ ಇದ್ದು, ಸಾರ್ವಜನಿಕ ರಸ್ತೆ ಆಗಿದ್ದರಿಂದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದರು. ನಾವೆಲ್ಲರೂ ಆಗ ಕೂಡಿ ಅಲ್ಲಿಗೆ ಹೋದೆವು. ಪಿರ್ಯಾದಿ ಮತ್ತು ಪಂಚ–1 ರವರಿಗೆ ಆರಕ್ಷಕ ಉಪಾಧೀಕ್ಷಕರು ಆರೋಪಿ ಕಚೇರಿಯಲ್ಲಿ ಏನು ನಡೆಯಿತು ಎಂದು ಹೇಳಿದರು. ಆಗ ನಡೆದ ವಿಷಯವನ್ನು ಪಿರ್ಯಾದುದಾರ ಮತ್ತು ಪಂಚ–1 ರವರು ತಿಳಿಸಿದರು. ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಮಾಡಿದರು ಆ ಸಮಯದಲ್ಲಿ ವಶಪಡಿಸಿಕೊಂಡಿದ್ದ ನೋಟುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರು. ನಂತರ ದೋಸಾ–11

ಮಂಜುನಾಥ ಪಟಗಾರ್ ಆರಕ್ಷಕ ಪೇದೆ ರವರ ಮೂಲಕ ಆರಕ್ಷಕ ಉಪಾಧೀಕ್ಷಕರು ಎರಡು ಪಿಂಗಾಣಿ ಬಟ್ಟಲುದಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿಸಿದರು. ನಂತರ ಆರೋಪಿಯ ಒಂದು ಕೈ ಬೆರಳನ್ನು ಒಂದು ಪಿಂಗಾಣಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದರು ಆಗ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ನಂತರ ಎರಡು ಗಾಜಿನ ಬಾಟಲಿಯಲ್ಲಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣ ವನ್ನು ಸಂಗ್ರಹಿಸಿ, ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರು. ಅದೇ ರೀತಿ ಆರೋಪಿಯ ಇನ್ನೊಂದು ಕೈ ಬೆರಳನ್ನು ಇನ್ನೊಂದು ಪಿಂಗಾಣಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದರು ಆಗ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ನಂತರ ಎರಡು ಗಾಜಿನ ಬಾಟಲಿಯಲ್ಲಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣ ವನ್ನು ಸಂಗ್ರಹಿಸಿ, ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರು. ನಂತರ ಆರೋಪಿ ಧರಿಸಿದ್ದ ಪ್ಯಾಂಟ್ ನ್ನು ಬದಲಾಯಿಸಲು ಆರೋಪಿಯ ತಮ್ಮ ವಿಟು ಎನ್ನುವವನ್ನು ಆರಕ್ಷಕ ಉಪಾಧೀಕ್ಷಕರು ಕರೆಸಿ ಒಂದು ಬೇರೆ ಪ್ಯಾಂಟ್ ನ್ನು ತರಲು ತಿಳಿಸಿದರು. ಆರೋಪಿಯ ತಮ್ಮ ಬೇರೆ ಪ್ಯಾಂಟ್ ನ್ನು ತೆಗೆದುಕೊಂಡು ಬಂದ ಅದನ್ನು ಆರೋಪಿಗೆ ಕೊಟ್ಟು ಆರೋಪಿ ಧರಿಸಿದ್ದ ಪ್ಯಾಂಟ್ ನ್ನು ತೆಗೆಸಿ , ಅದರ ಜೇಬನ್ನು ಮತ್ತೆ ದೋಸಾ-11 ರವರಿಂದ ಮತ್ತೊಂದು ಪಿಂಗಾಣಿ ಬಟ್ಟಲಿನಲ್ಲಿ ಸೋಡಿಯಮ್ ಕಾರ್ನೋನೇಟ್ ದ್ರಾವಣ ತಯಾರಿಸಿ ಅದರಲ್ಲಿ ಅದ್ದಿಸಿದರು, ಆಗ ಬಣ್ಣ ರಹಿತವಾಗಿದ್ದ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ಆಗ ಆ ಪ್ಯಾಂಟ್ ನ್ನು ಒಂದು ಲಕೋಟೆಯಲ್ಲಿ ಹಾಕಿ ಅದನ್ನು ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರು. ಆ ಸಮಯದಲ್ಲಿ ಪ್ಯಾಂಟಿನ ಜೇಬು ತೊಳೆದಾಗ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಒಂದು ಗಾಜಿನ ಬಾಟಲಿಯಲ್ಲಿ ಹಾಕಿ ಅದಕ್ಕೆ ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ

ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರು. ನಂತರ ಆರಕ್ಷಕ ಉಪಾಧೀಕ್ಷಕರು ಆರೋಪಿಗೆ ಅವನ ಹೇಳಿಕೆ ನೀಡುವಂತೆ ತಿಳಿಸಿದರು. ಆಗ ಆರೋಪಿ ತನ್ನ ವಿವರಣೆಯನ್ನು ಬರೆದುಕೊಟ್ಟ. ನಂತರ ಆರೋಪಿಗೆ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೇಳಿದರು ಆಗ ಆರೋಪಿ ತನ್ನ ಹೀರೋ ಹೊಂಡ ಬೈಕ್ ನಲ್ಲಿ ಇದ್ದ ದಾಖಲಾತಿಗಳನ್ನು ತೆಗೆದು ಹಾಜರುಪಡಿಸಿದ ಅದು 29 ಹಾಳೆ ಇತ್ತು ಅದನ್ನು ತನಿಖಾಧಿಕಾರಿಯವರು ಪರಿಶೀಲಿಸಿ ಅದರಲ್ಲಿ 1 ರಿಂದ 11 ನೇ ದಾಖಲಾತಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ನಂತರ ಪಿರ್ಯಾದುದಾರ ಡಿಜಿಟಲ್ ವಾಯ್ಸ ರೆಕಾರ್ಡರ್ ನ್ನು ಹಾಜರುಪಡಿಸಿದ ಅದನ್ನು ಚಾಲು ಮಾಡಿ ಕೇಳಲಾಗಿ ಅದರಲ್ಲಿ ಸಂಭಾಷಣೆ ಸ್ಪಷ್ಟವಾಗಿರಲಿಲ್ಲ. ಆಗ ಟ್ರಾಪ್ ಪಂಚನಾಮೆಯನ್ನು ದೋಸಾ-9 ರವರ ಮೂಲಕ ಆರಕ್ಷಕ ಉಪಾಧೀಕ್ಷಕರು ದಿನಾಂಕ 16.09.2013 ರ ರಾತ್ರಿ 8.40 ಗಂಟೆಯಿಂದ ದಿನಾಂಕ 17.09.2013 ರ ಬೆಳಿಗ್ಗೆ 1.00 ಗಂಟೆಯವರೆಗೆ ಕುಮಟಾ ಪ್ರವಾಸಿ ಮಂದಿರದಲ್ಲಿ ಮಾಡಿದರು. ಆರಕ್ಷಕ ಉಪಾಧೀಕ್ಷಕರ ಉಕ್ತಲೇಖನಕ್ಕೆ ದೋಸಾ-9 ರವರು ಲ್ಯಾಪಟಾಪ್ ನಲ್ಲಿ ಅದನ್ನು ಬೆರಳಚ್ಚು ಮಾಡಿದರು. ಆ ಸಮಯದಲ್ಲಿ ದೋಸಾ-10 ರವರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಆ ಛಾಯಾಚಿತ್ರಗಳನ್ನು ಮತ್ತು ಪಂಚನಾಮೆಯನ್ನು ಗುರುತಿಸುತ್ತೇನೆ. ಈಗ ನಾನು ಪಂಚನಾಮೆ ನೋಡಿರುತ್ತೇನೆ. ಅದನ್ನು ಆ ಸಮಯದಲ್ಲಿ ಮಾಡಿದ್ದು ಇರುತ್ತದೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಈಗ ನಾನು ಛಾಯಾಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-19 ರಿಂದ 37 ಎಂದು ಗುರುತಿಸಲಾಗಿದ್ದು ಅವುಗಳನ್ನು ಟ್ರಾಪ ಪಂಚನಾಮೆಯ ಸಮಯದಲ್ಲಿ ತೆಗೆದಿದ್ದಾರೆ. ಆಗ ಆರಕ್ಷಕ ಉಪಾಧೀಕ್ಷಕರು ತಯಾರಿಸಿದ ಸ್ಥಳದ ಕಚ್ಚಾ ನಕ್ಷೆಯನ್ನು ಗುರುತಿಸುತ್ತೇನೆ. ಈಗ ಅದನ್ನು ನೋಡಿರುತ್ತೇನೆ. ಅದನ್ನು ನಿಪಿ-38 ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ಆ ಸಮಯದಲ್ಲಿ ಜಪ್ತು ಮಾಡಿದ ಆರೋಪಿಯ ಪ್ಯಾಂಟನ್ನು ನೋಡಿರುತ್ತೇನೆ. ಅದನ್ನು ಈಗಾಗಲೇ ಮು.ಮಾ 9 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಆರೋಪಿಯಿಂದ ವಶಪಡಿಸಿಕೊಳ್ಳಲಾದ ರೂ.3000/- ಹಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದಲ್ಲಿ ಮೌಲ್ಯಯುತ ಪೆಟ್ಟಿಗೆಯಿಂದ ತೆಗೆದು ಹಣವನ್ನು

ನೋಡಿರುತ್ತೇನೆ. ಅದು ರೂ.1000/- ದ ಎರಡು ನೋಟು ಹಾಗೂ ರೂ.500/- ದ ಎರಡು ನೋಟು ಇದೆ. ಅದೇ ಹಣವನ್ನು ಆಗ ಆರೋಪಿ ಎಸೆದ ಮೇಲೆ ಜಪ್ತು ಮಾಡಲಾಗಿದೆ. ಸಾಕ್ಷಿಯು ಸದರಿ ನೋಟುಗಳನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ. ಜಪ್ತು ಮಾಡಿದ ಎಲ್ಲಾ ವಸ್ತುಗಳನ್ನು ಆರಕ್ಷಕ ಉಪಾಧೀಕ್ಷಕರು ಅವರ ತಾಬಾಗೆ ತೆಗೆದುಕೊಂಡರು. ನಾನು ಆಗ ಜಪ್ತು ಮಾಡಿದ ಮೇಲೆ ಹೇಳಿದ ಇತರೆ ವಸ್ತುಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗ ನಾನು ಆರೋಪಿಯ ಕೈಗಳನ್ನು ತೊಳೆದಾಗ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾದ ಧ್ರಾವಣವನ್ನು ಸಂಗ್ರಹಿಸಿ ಜಪ್ತು ಮಾಡಿದ ಬಾಟಲಿಗಳನ್ನು ನೋಡಿರುತ್ತೇನೆ. ಅವು ಆಗ ಜಪ್ತು ಮಾಡಿದ ವಸ್ತುಗಳೇ ಆಗಿವೆ. ಅದನ್ನು ಮು.ಮಾ 7 ಮತ್ತು 8 ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ನಾನು ಆರೋಪಿಯ ಪ್ಯಾಂಟ್ ನ ಬಲಬದಿ ಕಿಸೆಯನ್ನು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾದ ಧ್ರಾವಣವನ್ನು ಸಂಗ್ರಹಿಸಿ ಜಪ್ತು ಮಾಡಿದ ಬಾಟಲಿಯನ್ನು ನೋಡಿರುತ್ತೇನೆ. ಅದು ಆಗ ಜಪ್ತು ಮಾಡಿದ ವಸ್ತುವೇ ಆಗಿದೆ. ಅದನ್ನು ಮು.ಮಾ 10 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಆರೋಪಿಯನ್ನು ಕರೆದುಕೊಂಡು ಪಂಚರು , ನಾವು ಎಲ್ಲರೂ ವಾಪಸ್ತು ಕಾರವಾರದ ಲೋಕಾಯುಕ್ತ ಠಾಣೆಗೆ ಬಂದೆವು. ನಾನು ತನಿಖೆಗೆ ಸಹಾಯ ಮಾಡಿದ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆ.

5. ದಿನಾಂಕ 01.10.2013 ರಂದು ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಈ ಪ್ರಕರಣಕ್ಕೆ ಸಂಬಂಧಿಸಿದ ಜಪ್ತು ಮಾಡಿದ ವಸ್ತು ಸಂಖ್ಯೆ 1 ರಿಂದ 9 ಎ ಅನ್ನು ರಾಸಾಯನಿಕ ಪರೀಕ್ಷಾ ಕೇಂದ್ರ ಧಾರವಾಡಕ್ಕೆ ತೆಗೆದುಕೊಂಡು ಹೋಗಿ ಕೊಟ್ಟು ಅಲ್ಲಿಂದ ಸ್ವೀಕೃತಿ ಪಡೆದುಕೊಂಡು ಅದೇ ದಿನ ವಾಪಸ್ಸು ಆಗಿ ಆರಕ್ಷಕ ಉಪಾಧೀಕ್ಷಕರ ಮುಂದೆ ಸ್ವೀಕೃತಿಯನ್ನು ಮತ್ತು ವರದಿಯನ್ನು ಸಲ್ಲಿಸಿದೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಮರು ಹೇಳಿಕೆಯನ್ನು ನೀಡಿದ್ದೇನೆ.

**(ಪಾಟಿ ಸವಾಲಿಗೆ ಎನ್ ವಿ ಎನ್ ರವರು ಸಮಯಾವಕಾಶವನ್ನು ಕೋರಿದ್ದಾರೆ. ಸಾಕ್ಷಿಗೆ ರೂ.500/- ಭತ್ಯೆ ಪಾವತಿ ಮಾಡಿದ್ದಾರೆ . ಪಾಟೀ ಸವಾಲನ್ನು ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

Spl.C 7/2015
PW-8

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ